# ಪ್ರಹಸನ ಪ್ರಸಂಗ

ಈ ಜಗತ್ತಿನಲ್ಲಿ ನಾವು ಮಾಡಿದ ಕರ್ಮಕ್ಕೆ ನಾವು ನಿರೀಕ್ಷಿಸಿದ ಫಲವೇ ದೊರೆಯುವುದೆಂದು ಹೇಳಲಾಗುವುದಿಲ್ಲ. 'ನಾವೊಂದು ಬಗೆದರೆ ದೈವವಿನ್ನೊಂದು ಬಗೆಯುತ್ತದೆ'(man proposes God disposes). ಆದ್ದರಿಂದ ನಾವು ಅನಿರೀಕ್ಷಿತವಾದುದಕ್ಕೆ ಯಾವಾಗಲೂ ಸಿದ್ಧರಾಗಿರಬೇಕು.

ಒಬ್ಬ ವ್ಯಕ್ತಿಯು ಯುವತಿಯೋರ್ವಳನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದ. ಆಕೆಗೆ ಅನೇಕಾನೇಕ ಪ್ರೇಮಪತ್ರಗಳನ್ನು ಬರೆಯ ತೊಡಗಿದ. ಮೊದಲು ತಿಂಗಳಿಗೊಂದು, ಅನಂತರ ವಾರಕ್ಕೊಂದು, ಮುಂದೆ ದಿನಕ್ಕೊಂದು—ಹೀಗೆ ನೂರಾರು ಪತ್ರಗಳನ್ನು ಬರೆದ. ಕೊನೆಗೆ ಅವನಿಗೆ ಅತ್ಯಂತ ನಿರಾಸೆಯ ಸುದ್ದಿ ಸಿಕ್ಕಿತು: ಆ ಯುವತಿ ಪತ್ರವನ್ನು ತಂದುಕೊಡುತ್ತಿದ್ದ ಅಂಚೆಯವನನ್ನು ಪ್ರೀತಿಸಿ ಮದುವೆ ಯಾದಳಂತೆ.

* * * * * * * *

ಯೋಗಿಗಳು ಧ್ಯಾನದಲ್ಲಿ ತಲ್ಲೀನರಾಗಿ ಮೈ ಮರೆಯುತ್ತಾರೆ. ನಾವು ಅವಿದ್ಯಾ ನಿದ್ರೆಯಲ್ಲಿ ತಲ್ಲೀನರಾಗಿ ಮೈಮರೆಯುತ್ತೇವೆ. ನಾವು ನಿದ್ರೆಯಲ್ಲಿರುವೆವೆಂಬ ಅರಿವೇ ನಮಗಿರುವುದಿಲ್ಲ. ಎಂತಹ ಆಘಾತಗಳೂ ಪೆಟ್ಟುಗಳೂ ನಮ್ಮ ನಿದ್ರೆಗೆ ಭಂಗ ತರುವುದಿಲ್ಲ—ಅಂತಹ ಕುಂಭಕರ್ಣ ನಿದ್ರೆ ನಮ್ಮದು.

ಒಬ್ಬ ವ್ಯಕ್ತಿಗೆ ನಿದ್ರೆಯ ಸಮಸ್ಯೆ ಇತ್ತು—ಸುಲಭವಾಗಿ ನಿದ್ರೆ ಬರುತ್ತಿರಲಿಲ್ಲ. ಬಹಳ ಹೊತ್ತು ಹಾಸಿಗೆಯಲ್ಲಿ ಹೊರಳಾಡುತ್ತಿದ್ದನು. ಇದರಿಂದಾಗಿ ಅವನ ಆರೋಗ್ಯ ಕೆಟ್ಟಿತು. ತನ್ನ ಆಫೀಸ್ ಕೆಲಸಕ್ಕೂ ಸಮಯಕ್ಕೆ ಸರಿಯಾಗಿ ಹೋಗುವುದಕ್ಕೆ ಆಗುತ್ತಿರಲಿಲ್ಲ. ಸಮಸ್ಯೆ ಅಧಿಕವಾದಷ್ಟೂ ನಿದ್ರೆ ಕಡಮೆಯಾಗುತ್ತ ಬಂತು. ನಿದ್ರೆ ಕಡಮೆ ಯಾದಷ್ಟೂ ಸಮಸ್ಯೆ ಅಧಿಕವಾಗುತ್ತ ಹೋಯಿತು.

ಕೊನೆಗೆ ಆ ವ್ಯಕ್ತಿ ವೈದ್ಯರನ್ನು ಸಂಧಿಸಿದನು. ವೈದ್ಯರು ಪರೀಕ್ಷಿಸಿ ಬಹಳ ಶಕ್ತಿಯುಳ್ಳ ನಿದ್ರೆಗುಳಿಗೆಯನ್ನು ಅವನಿಗೆ ಕೊಟ್ಟರು.

ಭಾನುವಾರ ರಾತ್ರಿ ಆ ವ್ಯಕ್ತಿ ನಿದ್ರೆಗುಳಿಗೆಯನ್ನು ತಿಂದು ಮಲಗಿ ಕೊಂಡ. ಒಳ್ಳೆಯ ನಿದ್ರೆಯಾಯಿತು. ಅಲಾರ್ಮ್ ಹೊಡೆಯುವುದಕ್ಕೆ ಮುಂಚೆಯೇ ಅವನಿಗೆ ಎಚ್ಚರವಾಯಿತು. ಬೆಳಗಿನ ಕಾರ್ಯಕ್ರಮ ಗಳನ್ನೆಲ್ಲ ಮುಗಿಸಿ ಸಮಯಕ್ಕೆ ಸರಿಯಾಗಿ ಆಫೀಸಿಗೆ ಹೋದನು.

ಮ್ಯಾನೇಜರ್ ಚೇಂಬರ್‌ಗೆ ಹೋಗಿ ಬಹಳ ಸಂತೋಷದಿಂದ ಆ ವ್ಯಕ್ತಿ ಹೇಳಿದ : 'ಸಾರ್, ಇಂದು ಬೆಳಗ್ಗೆ ಬೇಗ ಏಳುವುದಕ್ಕೆ ನನಗೆ ಏನೂ ತೊಂದರೆಯೇ ಆಗಲಿಲ್ಲ.'

ಮ್ಯಾನೇಜರ್ : 'ಅದು ಸರಿ, ಆದರೆ ಸೋಮವಾರ ಮತ್ತು ಮಂಗಳವಾರ ಎಲ್ಲಿಗೆ ಹೋಗಿದ್ದೆ?'

* * * * * * * *

ಅನೇಕರು ಆಧ್ಯಾತ್ಮಿಕತೆಯ ಕಡೆಗೆ ತಿರುಗುವುದು ಅನಿರೀಕ್ಷಿತ ಆಘಾತದ ಫಲವಾಗಿ. ಆಗ ಅವರು ಬೇಡವೆಂದರೂ ಆಧ್ಯಾತ್ಮಿಕತೆಯ ಕಡೆಗೆ ತಳ್ಳಲ್ಪಡುತ್ತಾರೆ,ಅನಂತರ ಅದರ ಪ್ರಯೋಜನ ಪಡೆಯು ತ್ತಾರೆ. ಆಗ ಅವರು ತಮಗಾದ ಆಘಾತವನ್ನು ಆಶೀರ್ವದಿಸುತ್ತಾರೆ.

ಒಂದು ದೊಡ್ಡ ಕಾರ್ಖಾನೆ. ಒಮ್ಮೆ ಅದಕ್ಕೆ ಬೆಂಕಿ ಬಿತ್ತು. ಎಲ್ಲ ದೊಡ್ಡ ದೊಡ್ಡ ಅಗ್ನಿಶಾಮಕದಳದವರಿಗೆ ಫೋನ್ ಮಾಡ ಲಾಯಿತು. ದೂರದೂರದಿಂದ ಅಗ್ನಿಶಾಮಕ ದಳದವರು ಬಂದು ಬೆಂಕಿ ಆರಿಸಲು ಪ್ರಾರಂಭಿಸಿದರು. ಆದರೆ ಅವರ ಸರ್ವಪ್ರಯತ್ನ ಸಫಲವಾಗಲಿಲ್ಲ—ನೀರಿನಲ್ಲಿ ಹೋಮ ಮಾಡಿದಂತಾಯಿತು! ಬೆಂಕಿ ಜೋರಾಗಿಯೇ ಉರಿಯುತ್ತಿತ್ತು.

ಕೊನೆಗೆ ಸ್ಥಳೀಯ ಚಿಕ್ಕ ಅಗ್ನಿಶಾಮಕ ದಳದವರಿಗೆ ಫೋನ್ ಮಾಡಲಾಯಿತು. ಅಲ್ಲಿಯ ಅಗ್ನಿಶಾಮಕ ವಾಹನ ಬಂತು. ಅದು ನೇರವಾಗಿ ಕಾರ್ಖಾನೆಯ ಅತ್ಯಂತ ಹತ್ತಿರ ಹೋಯಿತು. ಎಲ್ಲರಿಗೂ ಆಶ್ಚರ್ಯ. ಅಂತೂ ಆ ವಾಹನ ಚಾಲಕನು ಕಾರ್ಖಾನೆಯ ಬೆಂಕಿ ಯನ್ನು ಆರಿಸುವುದರಲ್ಲಿ ಯಶಸ್ವಿಯಾದ.

ಕಾರ್ಖಾನೆಯವರು ಅವನ ಧೈರ್ಯವನ್ನು ಮೆಚ್ಚಿ ಅವನಿಗೆ ಸಲ್ಲಬೇಕಾದ ಹಣವನ್ನು ಕೊಡುವುದರ ಜೊತೆಗೆ ಹತ್ತುಸಾವಿರ ರೂಪಾಯಿ ಬಹುಮಾನವನ್ನೂ ನೀಡಿದರು.

ಕೂಡಲೆ ಅಲ್ಲಿಯೇ ಇದ್ದ ಪತ್ರಿಕಾ ವರದಿಗಾರನು, 'ಆ ಹತ್ತು ಸಾವಿರ ರೂಪಾಯಿಯನ್ನು ಏನು ಮಾಡುತ್ತೀರಿ? ' ಎಂದು ಡ್ರೈವರ್ ನನ್ನು ಕೇಳಿದನು. 'ಮೊದಲು ಈ ವಾಹನದ ಬ್ರೇಕನ್ನು ರಿಪೇರಿ ಮಾಡಿಸುತ್ತೇನೆ', ಎಂದನು ಡ್ರೈವರ್.

* * * * * * * *

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಜೂನ್ 2001**

3 ಭಾನುವಾರ ವಿಶೇಷ ಆಧ್ಯಾತ್ಮಿಕ ಶಿಬಿರ

ಪಾಂಡವಪುರ ತಾಲೂಕು ಪಟ್ಟಸೋಮನಹಳ್ಳಿಯಲ್ಲಿರುವ

ಶ್ರೀ ಶಿವಶೈಲ ದೇವಸ್ಥಾನದಲ್ಲಿ.

( ಬೆಳಗ್ಗೆ 9.00 ರಿಂದ ಸಂಜೆ 4.00 ರವರೆಗೆ )

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ